


# ದಸರೆಗೆ ಅಂಚೆಯ ಮೊಹರು

ಅಂಚೆ ದಸ್ತಾವೇಜುಗಳಲ್ಲಿ ಮೈಸೂರು ವಸ್ತು ವೈವಿಧ್ಯಕ್ಕೆ ಮಹತ್ವದ ಸ್ಥಾನವಿದೆ. ಸಾಂಸ್ಕೃತಿಕ ನಗರಿಯ ವಿಶೇಷಗಳು ಅಂಚೆಚೀಟಿ, ಲಕೋಟೆಗಳ ರೂಪದಲ್ಲಿ ಗೌರವಪಡೆದಿವೆ.

■ ಜಗನ್ನಾಥ ಪ್ರಕಾಶ್ ಎನ್.

ಸಾಂಸ್ಕೃತಿಕ ಚಟುವಟಿಕೆಗಳಿಗೂ ಮೈಸೂರು ದಸರೆಗೂ ಇನ್ನಿಲ್ಲದ ನಂಟು. ದಸರೆಯ ಸಂಭ್ರಮದಲ್ಲಿ ಸಾಹಿತ್ಯ, ಸಂಗೀತ, ಕ್ರೀಡಾ ಚಟುವಟಿಕೆಗಳಿಗೆ ಮಹತ್ವದ ಸ್ಥಾನವಿದೆ. ಮನಮೋಹಕ ಅರಮನೆಗಳು, ಖ್ಯಾತನಾಮ ಸಂಗೀತಗಾರರು ಹಾಗೂ ಪ್ರಸಿದ್ಧ ಸಾಹಿತಿಗಳ ಕಾರಣದಿಂದಲೂ ಮೈಸೂರು ಸಹೃದಯರ ಪಾಲಿಗೆ ಚುಂಬಕ. ಮೈಸೂರಿನ ಮತ್ತೊಂದು ವಿಶೇಷ ಅಂಚೆಯ ಇತಿಹಾಸದೊಂದಿಗೆ ಹೊಂದಿರುವ ನಂಟು.

ಆಧುನಿಕ ಅಂಚೆ ವ್ಯವಸ್ಥೆ ಇಂಗ್ಲೆಂಡ್‌ನಲ್ಲಿ ರೂಪುಗೊಳ್ಳುವುದಕ್ಕೆ ಮೊದಲೇ ಈ ಸಾಂಸ್ಕೃತಿಕ ನಗರಿಯಲ್ಲಿ ‘ಮೈಸೂರು ಅಂಚೆ’ ಹೆಸರಿನ ಪ್ರಯುಕ್ತ ಪದ್ಧತಿ ಚಾಲ್ತಿಯಲ್ಲಿತ್ತು. ಈ ‘ಮೈಸೂರು ಅಂಚೆ’ಯೇ ನಂತರದ ದಿನಗಳಲ್ಲಿ, ಸ್ವಾತಂತ್ರ್ಯಾನಂತರ ಆಧುನಿಕ ಸ್ವರೂಪಕ್ಕೆ ಒಗ್ಗಿಕೊಂಡಿತು; ಆಧುನಿಕ ಅಂಚೆ ವ್ಯವಸ್ಥೆಯ ದಸ್ತಾವೇಜುಗಳಲ್ಲಿ ಮುಖ್ಯ ಸ್ಥಾನ ಪಡೆಯಿತು.

ಚಿಕ್ಕದೇವರಾಜ ಒಡೆಯರ್ ಅವರ ಕಾಲದಲ್ಲಿ 1972–73ರ ಸುಮಾರಿನಲ್ಲಿ ರೂಪುಗೊಂಡ ‘ಮೈಸೂರು ಅಂಚೆ’ ಆರಂಭದಲ್ಲಿ ರಾಜಪ್ರಭುತ್ವದ ಪತ್ರಗಳ ಬಟವಾಡೆಗೆ ಮಾತ್ರ ತನ್ನ ಕಾರ್ಯವ್ಯಾಪ್ತಿಯನ್ನು ಸೀಮಿತಗೊಳಿಸಿಕೊಂಡಿತ್ತು. ನಂತರದ ದಿನಗಳಲ್ಲಿ ಸಾರ್ವಜನಿಕರಿಗೂ ಅಂಚೆಯ ಸೇವೆ ವಿಸ್ತರಣೆಗೊಂಡಿತು. ಆಡಳಿತದ ಪತ್ರಗಳನ್ನು ದೂರದ ಪ್ರದೇಶಗಳಿಗೆ ತಲುಪಿಸಲು ‘ಮೈಸೂರು ಅಂಚೆ’ಯ ಪಾತ್ರ ದೊಡ್ಡದಿತ್ತು.

## ನಾಡಿನ ಉದ್ದಗಲಕ್ಕೂ ಓಲೆಕಾರರು

‘ಮೈಸೂರು ಅಂಚೆ’ ಅತ್ಯಂತ ಸುವ್ಯವಸ್ಥಿತವಾಗಿತ್ತು. ಈ ವ್ಯವಸ್ಥೆಯ ಉನ್ನತ ಅಧಿಕಾರಿ ಅಂಚೆ ಭಕ್ಷಿ. ಅವರ ಮೇಲ್ವಿಚಾರಣೆಯಲ್ಲಿ ಅಂಚೆ ಶಿರಸ್ತೇದಾರರು, ಪೇಷ್ಕಾರರು, ಗುಮಾಸ್ತರು, ಶರಾಫರು, ದಫೇದಾರರು, ತನಿಖಾಧಿಕಾರಿಗಳು, ಮುತ್ಸದ್ದಿಗಳು ಹಾಗೂ ಜವಾನರು ಕಾರ್ಯನಿರ್ವಹಿಸುತ್ತಿದ್ದರು. ಈಗಿನ ಪೋಸ್ಟ್‌ಮ್ಯಾನ್‌ಗಳನ್ನು ಆಗ ಓಲೆಕಾರರು ಇಲ್ಲವೇ ರನ್ನರ್‌ಗಳೆಂದು ಕರೆಯಲಾಗುತ್ತಿತ್ತು. ಗೆಜ್ಜೆ ಕಟ್ಟಿದ ದಂಡ ಹಾಗೂ ಪತ್ರಗಳು ತುಂಬಿದ್ದ ಚೀಲದೊಂದಿಗೆ ರಾಜ್ಯದಾದ್ಯಂತ ಓಲೆಕಾರರು ಸಂಚರಿಸುತ್ತಿದ್ದರು. ಮೈಸೂರು ಅಂಚೆಯ ಪ್ರವರ್ಧಮಾನ ಕಾಲದಲ್ಲಿ ಒಂದೂವರೆ ಸಾವಿರಕ್ಕೂ ಹೆಚ್ಚು ಓಲೆಕಾರರು ಕಾರ್ಯ ನಿರ್ವಹಿಸುತ್ತಿದ್ದರಂತೆ.

ಸೇವಾ ಮನೋಭಾವದಿಂದ ಕಾರ್ಯ ನಿರ್ವಹಿಸುತ್ತಿದ್ದ ‘ಮೈಸೂರು ಅಂಚೆ’ ವ್ಯವಸ್ಥೆ ಆದಾಯ ಗಳಿಕೆಯ ಬಗ್ಗೆ ಅಷ್ಟೇನೂ ಗಮನಹರಿಸಿರಲಿಲ್ಲ. ಕೆಲವು ಪ್ರದೇಶಗಳಲ್ಲಿ ಶಿಕ್ಷಕರು ಕೂಡ ಅಂಚೆಯ ಕಾರ್ಯಭಾರವನ್ನು ಹೆಚ್ಚುವರಿಯಾಗಿ ನಿರ್ವಹಿಸುತ್ತಿದ್ದರಂತೆ.

ಭಾರತದ ಅತ್ಯುತ್ತಮ ಪ್ರಾದೇಶಿಕ ಅಂಚೆ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದ್ದ ‘ಮೈಸೂರು

